ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE 8/4/2021

# ಮೇ 2 ರ ನಂತರ ಸಿಎಂ ಬದಲಾವಣೆ

8/4/21

ಬೆಂಗಳೂರು: ಮೂರು ಕ್ಷೇತ್ರಗಳ ಉಪ ಚುನಾವಣೆಯ ಫಲಿತಾಂಶದ ನಂತರ ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಯಾಗಲಿದ್ದಾರೆ. ಮುಖ್ಯಮಂತ್ರಿ ಯಡಿಯೂರಪ್ಪ ಅವರು ಏಪ್ರಿಲ್ 17 ರ ನಂತರ ಗೌರವಯುತವಾಗಿ ರಾಜೀ ನಾಮೆ ನೀಡಬೇಕು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆಗ್ರಹಿಸಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿ, ಏಪ್ರಿಲ್ 17 ರ ಬಳಿಕ ಬಿಜೆಪಿಯಲ್ಲಿ ಇನ್ನೂ ಬಹಳ ಜನ ಶಾಸಕರು ಹಾಗೂ ಸಚಿವರು ರೊಚ್ಚಿಗೇಳುತ್ತಾರೆ. ಸೂರ್ಯ ಚಂದ್ರ ಇರುವವರೆಗೂ ಯಡಿಯೂರಪ್ಪ ಸಿಎಂ ಎಂದು ಹೇಳುತ್ತಾರೆ. ಜಮ್ಮು ಕಾಶ್ಮೀರಕ್ಕೆ ಇದುವರೆಗೂ ನೀಡಲಾಗಿದ್ದ ವಿಶೇಷ ಸ್ಥಾನವನ್ನು ಕಿತ್ತು ಬಿ.ಎಸ್. ಯಡಿಯೂರಪ್ಪ ಅವರಿಗೆ ಬಿಜೆಪಿಯಲ್ಲಿ ವಿಶೇಷ ಸ್ಥಾನಮಾನ ನೀಡಲಾಗಿದೆಯೇ? 75 ವರ್ಷ ಮೀರಿದವರಿಗೆ ಅಧಿಕಾರ ಇಲ್ಲ ಎನ್ನುವ ಬಿಜೆಪಿಯ ನಿಯಮ ಯಡಿಯೂರಪ್ಪ ಅವರಿಗೆ ಅನ್ವಯ ಆಗುವುದಿಲ್ಲವೇ ? ಯಡಿಯೂರಪ್ಪಗೆ 2 ವರ್ಷ ಬೋನಸ್ ಸಿಕ್ಕಿದೆ. ಅದೇ ಹೆಚ್ಚು ಎಂದು ಹೇಳಿದರು.

**ಯತ್ನಾಳ್ ಹಿಂದೆ ಯಾರಿದ್ದಾರೆ?:** ಯಡಿಯೂರಪ್ಪ ಹಾಗೂ ಅವರ ಪುತ್ರ ಬಿ.ವೈ ವಿಜಯೇಂದ್ರ ವಿರುದ್ಧ ಆರೋಪ ಮಾಡಿದ್ದಕ್ಕೆ ಪಕ್ಷ ನೋಟೀಸ್ ನೀಡಿ 60 ದಿನವಾದರೂ ಯಾವುದೇ ಕ್ರಮ ಕೈಗೊಳ್ಳದಿರುವುದರಿಂದ ನನ್ನಹಿಂದೆ ಹೈಕಮಾಂಡ್‌ನ ಯಾವುದಾದರೂ ದೊಡ್ಡ ಶಕ್ತಿ ಇರಬೇಕಲ್ಲಾ, ಪಕ್ಷದ ಶಾಸಕರು ಹಾಗೂ ಕಾರ್ಯಕರ್ತರು ನನ್ನ ಜೊತೆಗಿದ್ದಾರೆ. ದೊಡ್ಡ ಶಕ್ತಿ ಯಾರಿದ್ದಾರೆ ಅಂತ ಸಂದರ್ಭ ಬಂದಾಗ ಹೇಳುತ್ತೇನೆ ಎಂದರು.

## ವಿಜಯೇಂದ್ರಗೆ ಇಡಿ ವಿಚಾರಣೆ: ಅಲ್ಲಗಳೆಯಲಿ



ಸಿಎಂ ಯಡಿಯೂರಪ್ಪ ಅವರ ಪುತ್ರ, ಬಿ.ವೈ. ವಿಜಯೇಂದ್ರ ಅವರನ್ನು ಜಾರಿ ನಿರ್ದೇಶನಾಲಯ ಫೆಡರಲ್ ಬ್ಯಾಂಕ್ ಹಣದ ಅವ್ಯವಹಾರದಲ್ಲಿ ಕರೆದು ವಿಚಾರಣೆ ನಡೆಸಿದೆ ಎಂದು ಯತ್ನಾಳ್ ಆರೋಪಿಸಿದ್ದಾರೆ. ಅಲ್ಲದೇ ತಾವು ಮಾಡಿರುವ ಆರೋಪವನ್ನು ವಿಜಯೇಂದ್ರ ಸುಳ್ಳು ಎಂದು ಸಾಬೀತು ಪಡಿಸಲಿ ಎಂದು ಸವಾಲು ಹಾಕಿದ್ದಾರೆ. ಇನ್ನು ಸ್ವಲ್ಪ ದಿನದಲ್ಲಿ ವಿಜಯೇಂದ್ರ ಅವರ ನಿಜ ಬಣ್ಣ ಬಯಲಾಗಲಿದೆ. ಕೆಪಿಸಿಸಿ ಅಧ್ಯಕ್ಷ ಡಿ.,ಕೆ. ಶಿವಕುಮಾರ್ ಅವರನ್ನು ಯಾವ ಕುರ್ಚಿ ಮೇಲೆ ಕೂಡಿಸಿದ್ದರೋ, ಅದೇ ಕುರ್ಚಿ ಮೇಲೆ ವಿಜಯೇಂದ್ರನನ್ನು ಕೂಡಿಸಿ ವಿಚಾರಣೆ ಮಾಡಿದ್ದಾರೆ. ಸೂಟು ಬೂಟು ಹಾಕಿಕೊಂಡು ಹೋಗಿದ್ದ ವಿಜಯೇಂದ್ರನಿಗೆ ಸೂಟು ಹೊರಗೆ ಬಿಚ್ಚಿಟ್ಟು ಒಳಗೆ ಕರೆಯಿಸಿ ವಿಚಾರಣೆ ಮಾಡಿದ್ದಾರೆ. ಈ ಆರೋಪದ ಬಗ್ಗೆ ಇಬ್ಬರೂ ತಂದೆ ಮಗ ನೇರವಾಗಿ ಉತ್ತರ ನೀಡಲಿ, ಅದರ ಬದಲು ಚಿಲ್ಲರೆ ವ್ಯಕ್ತಿಗಳಿಂದ ಹೇಳಿಕೆ ಕೊಡಿಸುವುದು ಬೇಡ ಎಂದು ಯತ್ನಾಳ್ ಸವಾಲು ಹಾಕಿದ್ದಾರೆ.